

ಬಗೆಹರಿಸಬೇಕಿದೆ. ಇದು ಸಮಸ್ಯೆ ಎನ್ನುವುದಕ್ಕೆ ಕೆಲವು ಕಾರಣವು ಇವೆ! ಹೇಳುವೆ ಒಂದೊಂದೇ ಕೇಳು:

ಯಾಕೋ ಇತ್ತೀಚೆಗೆ ನಿನ್ನದೇ ನೆನಪುಗಳು ತಲೆ ಚಿಟ್ಟು ಹಿಡಿಯುವಷ್ಟು. ಮನಸ್ಸು ಒಮ್ಮೆಲೆ ನಿನ್ನ ನೆನಪಿನ ಸೆಲೆಯಾಗಿದೆ. ಹೆಜ್ಜೆ, ಹೆಜ್ಜೆಗೂ ನಿನ್ನದೇ ನೆನಪು ಯಾಕೆ ಎಂದು ನನಗೆ ಅಚ್ಚರಿಯಾಗುತ್ತಿದೆ! ದಿನದ ಎಲ್ಲ ಸಮಯ, ತಾಸು, ಕ್ಷಣ ಕ್ಷಣದಲೂ ನೀನೆ ಆವರಿಸಿರುವೆ. ಎಲ್ಲ ದಿಕ್ಕಿನಲ್ಲೂ ಕಂಗಳು ನಿನ್ನ ರೂಪವನ್ನೆ ಹುಡುಕುತ್ತಿವೆ. ಉಸಿರಾಡಿದ ಉಸಿರು ಕೂಡ ನಿನ್ನ ಹುಡುಕಿಕೊಂಡೆ ಬಯಲಲಿ ಹರಿದಾಡುತ್ತಿದೆ. ಹೃದಯದ ಪ್ರತಿ ಬಡಿತದ ಸದ್ದು ನಿನ್ನ ಹೆಸರನ್ನೇ ಕೂಗಿ ಕೂಗಿ ಕರೆಯುತ್ತಿದೆ.

ಇನ್ನು ಕೆಲವು ವಿಷಯ ಹೇಳುತ್ತೇನೆ ಕೇಳು. ಅವು ಕೇಳಿದರೆ ನೀನೊಂದು ಹುಚ್ಚು ಎಂದು ಮೂಗು ಮುರಿಯಬಹುದು: ನಾನು ಓಡಾಡುವ ನೆಲದಲ್ಲೇ ನೀನು ಓಡಾತ್ತಿರುವೆಯಲ್ಲ ಎಂದು ರೋಮಾಂಚನಗೊಳ್ಳುತ್ತೇನೆ. ನನ್ನ ಮೈ ನಡುಗಿಸಿದ ಚಳಿ, ಬೆವರು ಹುಟ್ಟಿಸಿದ ಬಿಸಿಲು, ತೋಯಿಸಿದ ಮಳೆ ನಿನ್ನಲ್ಲೂ ಅವೇ ಕಂಪನ ಸೃಷ್ಟಿಸಿವೆಯಲ್ಲ ಎಂದು ಕಲ್ಪಿಸಿ ಮೂಕವಿಸ್ಮಿತನಾಗುತ್ತೇನೆ. ಇಬ್ಬರು ನೋಡುವುದು ಅದೇ ಸೂರ್ಯ, ಚಂದ್ರ, ತಾರೆಯರನ್ನು ಎಂದು ಪುಳಕಗೊಳ್ಳುತ್ತೇನೆ. ಇವೆಲ್ಲ ಕಲ್ಪನೆಗಳು ಈಗ ವಾಸ್ತವ ಹೇಳುತ್ತೇನೆ ಕೇಳು: ಯಾವುದಾದರೂ ಹುಡುಗಿಯ ದನಿ ಕೇಳಿದರೆ ನಿನ್ನದೇ ಇರಬಹುದಾ ಎಂದು ಕುತೂಹಲ ತುಂಬಿತ ನಡುಕದಿಂದ ಅತ್ತ ನೋಡುತ್ತೇನೆ, ಮೊಬೈಲಿಗೆ ಯಾವುದಾದರೂ ಕರೆ ಬಂದರೆ ನಿನ್ನದೇ ಇರಬಹುದಾ ಎಂದು ದಡಬಡಿಸಿ ನೋಡುತ್ತೇನೆ, ಯಾವುದೋ ಮೆಸೇಜ್ ಗುಂಯ್ ಗುಟ್ಟಿದರೆ ನೀನೇ ಕಳಿಸಿರಬೇಕು ಎಂದು ಆಸೆಗಣ್ಣಿನಿಂದ ಓದುತ್ತೇನೆ, ನೀನು ಯಾವಾಗಲೂ ಒಮ್ಮೆ ಕಳಿಸುವ ಸಂದೇಶಗಳಲ್ಲಿ ನಿನ್ನ ಮನದಾಳದ ಯಾವುದೋ ಅವ್ಯಕ್ತಭಾವದ ಸುಳಿವು ಸಿಗುವುದೇ ಎಂದು ಉಸಿರು ಬಿಗಿ ಹಿಡಿದುಕೊಂಡೂ ಅಥವಾ ಜೀವ ಕೈಯಲ್ಲಿ ಹಿಡಿದುಕೊಂಡೋ ಓದುತ್ತೇನೆ, ಸದಾ ನಿನ್ನ ಚಲನವಲನಗಳ ಮೇಲೆಯೇ ಗಮನವಿಟ್ಟಿರುತ್ತೇನೆ, ಯಾಕೋ ಇತ್ತೀಚೆಗೆ ನಿನ್ನ ಹೊರತು ಯಾವುದರಲ್ಲೂ ಆಸಕ್ತಿಯಿಲ್ಲ.

ಓದು, ಬರಹ, ಆಟ, ಹರಟೆ, ಗೆಳೆಯರು ಎಲ್ಲರಿಂದ ದೂರವಾಗಿದ್ದೇನೆ, ಮನೆಯಲ್ಲಂತೂ ಇದ್ದು ಇಲ್ಲದಂತಿದ್ದೇನೆ. ನಿನ್ನ ಲಹರಿಯಲ್ಲಿ ಮನೆಯಲ್ಲಿ ಏನಾಗುತ್ತಿದೆ ಅನ್ನುವ ಅರಿವು ಇಲ್ಲ. ಈಗೀಗ ಕವನಗಳನ್ನು ಬರೆಯುತ್ತಿದ್ದೇನೆ, ಬರೀ ನಿನ್ನ ಮೇಲೆಯೇ ಅವೆಲ್ಲ ತೋರಿಸುವ ಆಸೆಯು ಇದೆ. ಮತ್ತೆ ನಾನು ಮುಖ್ಯವಾಗಿ ಹೇಳುವುದನ್ನೇ ಬಿಟ್ಟು ಬೇರೆಯೆಲ್ಲಾ ಹೇಳ್ತಿದ್ದೀನಿ ನೋಡು. ಅದೊಂದು ಸಾಲು ಹೇಳೋಕೆ ಎಷ್ಟು ಭಯವಾಗುತ್ತಿದೆ ನನಗೇ ಅಚ್ಚರಿ! ಆ ಸಾಲು ಯಾವುದೆಂದು ನಿನಗೂ ಗೊತ್ತಾಗಿರಬೇಕು. ಅದ್ಹೇಗೆ ಗೊತ್ತಾಗಲ್ಲ? ಗೊತ್ತಾಗಿಯೇ ಇರುತ್ತೆ ಯಾಕೆಂದರೆ ನಾನು ಇಷ್ಟು ಹೇಳಿದ ಮೇಲೂ ಏನು ತಿಳಿಯುತ್ತಿಲ್ಲ, ಅರ್ಥವು ಆಗುತ್ತಿಲ್ಲ ಅನ್ನುವುದಕ್ಕೆ ನೀನು ಅಷ್ಟು ಮುಗ್ಧೆ ಅಲ್ಲವೆ ಅಲ್ಲ ಅನ್ನುವುದು ನನ್ನ ಭಾವನೆ. ನೀನೂ ಹೀಗೆನಾ ಎಲ್ಲ ಹುಡುಗರಂತೆ..! ಅಂತ ಅನ್ನಿಸಿದರೆ ಕ್ಷಮಿಸಿ ಬಿಡು. ಯಾಕೆಂದರೆ ನಾನು ನಿನ್ನ ಪ್ರೀತಿಸುತ್ತಿದ್ದೇನೆ ಚೈತ್ರ.

ಇದಿಷ್ಟು ತನ್ನ ಲ್ಯಾಪ್‌ಟಾಪ್ ನಲ್ಲಿ ಟಂಕಿಸದವನೇ ಪ್ರಿಂಟಿಗೆ ಕೊಟ್ಟ. ಆ ಹಾಳೆಯ ಮೇಲೆ ಮುದ್ದಾಗಿ ಮೂಡಿದ ತನ್ನ ಭಾವನೆಗಳೆಲ್ಲವನ್ನು ಒಮ್ಮೆ ಅಷ್ಟೇ ಅಕ್ಕರೆಯಿಂದ ನೋಡಿದ. ಮತ್ತೆ ಮತ್ತೆ ಓದಿದ. ಏನೋ ಒಂದು ರೀತಿಯ ಸುಖ ಅವನೆದೆಯಲಿ ಉಮ್ಮಳಿಸಿತು. ಆದರೆ, ಇದನ್ನು ಅವಳಿಗೆ ತಲುಪಿಸುವುದು ಹೇಗೆ...? ಯೋಚಿಸಿದಾಗ ಒಳಗೆ ಸಣ್ಣನೆಯ ನಡುಕ ಹುಟ್ಟಿತು! ಯಾವಾಗ ಅವಳಿಗೆ ಈ ಪ್ರೇಮ ಪತ್ರ ತಲುಪಿಸುವುದು..? ಹೇಗೋ ಬೆಳಗ್ಗೆ ನನ್ನ ಬೈಕಲ್ಲೇ ಕಂಪನಿಗೆ ಬರುತ್ತಾಳಲ್ಲ.. ಆಗ..ಬೇಡ..ಬೆಳ್ ಬೆಳಿಗ್ಗೆ ಯಾವ ಮೂಡಲ್ಲಿರುತ್ತಾಳೋ..! ಲಂಚ್ ಬ್ರೇಕ್‌ಲ್ಲಿ ನನ್ನ ಪಕ್ಕನೇ ಕೂಡುತ್ತಾಳಲ್ಲ.. ಆಗ..ಬೇಡ..ಎಲ್ಲರೂ ಇರುತ್ತಾರೆ..! ಸಂಜೆ ಟೀ ಬ್ರೇಕ್‌ಗೆ ಕೊಟ್ಟರೆ..ಅಯ್ಯೋ ಅದು ಸಲೀಸಲ್ಲ ಆಗ ಅವಳು ಅವಳ ಡಿಪಾರ್ಟ್‌ಮೆಂಟಿನ ಕೊಲೀಗ್ ಜತೆ ಇರುತ್ತಾಳೆ..! ಸಂಜೆ ಮನೆಗೂ ನನ್ನ ಬೈಕಲ್ಲೇ ಬರುತ್ತಾಳಲ್ಲ ಆಗ..ಬೇಡ ಪಾಪ ಕೆಲಸ ಮುಗಿಸಿಕೊಂಡು ಯಾವ ಮೂಡಲ್ಲಿ ಮನೆಗೆ ಹೋಗ್ತಾ ಇರ್ತಾಳೋ...? ಮತ್ತೆ ಯಾವಾಗ, ಹೇಗೆ ಇದನ್ನು ತಲುಪಿಸೋದು...? ಹೇಗೋ ಎಲ್ಲ ವಿಷಯ ಇದರಲ್ಲಿ ಬರೆದಾಗಿದೆ, ಇನ್ನು ತಲುಪಿಸಬೇಕಷ್ಟೆ.

ಅದರಲ್ಲೂ.. ಒಂದೇ ಏರಿಯಾದಲ್ಲಿ ಇರೋರು, ಅದರಲ್ಲೂ ತಾನು ಬಾಡಿಗೆ ಇರುವ ರೂಮಿನ ಪಕ್ಕನೇ ಅವಳ ಮನೆ ಇರುವುದರಿಂದ ಯಾವಾಗಲಾದರೂ ತಲುಪಿಸೋಣ ಅಂತ ಆ ಹಾಳೆಯನ್ನು ನಯವಾಗಿ ಮಡಚಿ ತನ್ನ ಜೇಬಿನಲ್ಲಿ ಇಟ್ಟುಕೊಂಡ.

* * *

ಹೀಗೊಂದು ಪ್ರೇಮ ಪತ್ರವನ್ನು ಬರೆದು ಅದನ್ನು ಹೇಗೆ ತಲುಪಿಸುವುದು, ಎಲ್ಲಿ ತಲುಪಿಸುವುದು ಎಂದು ಯೋಚಿಸುತ್ತಿರುವವನ ಹೆಸರು ಉದಯರಾಜ ಅಂತ, ಇವನಲ್ಲಿ ಪವಿತ್ರ ಪ್ರೀತಿಯ ಸೆಲೆಯೊಡಿಸಿದವಳ ಹೆಸರು ಚೈತ್ರ ಅಂತ. ಅಷ್ಟಕ್ಕೂ ಇವರಿಬ್ಬರ ಪರಿಚಯವಾದದ್ದೇ ಒಂದು ರೀತಿಯ ಆಕಸ್ಮಿಕ.

ಈ ಉದಯರಾಜ ಬಿಸಿಲನಾಡು ಯಾದಗಿರಿ ಜಿಲ್ಲೆಯವನು. ಇಂಜಿನಿಯರಿಂಗ್ ಮುಗಿಸಿ ಬೆಂಗಳೂರಿನ ಪೀಣ್ಯ ಸೆಕೆಂಡ್ ಸ್ಟೇಜ್‌ನ ಯಾವುದೋ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ. ತಾನು ಕೆಲಸ ಮಾಡುವ ಕಂಪನಿಯ ಹತ್ತಿರದಲ್ಲೇ ರೂಮು ಮಾಡಿದರೆ ಆರಾಮ ಅಂತ ಅಲ್ಲೇ ಹತ್ತಿರದ ಬಡಾವಣೆಯಲ್ಲಿಯೇ ಒಂದು ಚಿಕ್ಕ ರೂಮು ಬಾಡಿಗೆ ಪಡೆದು ನೆಲೆಸಿದ. ಉದಯನಿದ್ದುದ್ದು ಬೃಹದಾಕಾರದ ಬಿಲ್ಡಿಂಗು, ಅಲ್ಲಿ ಇನ್ನೂ ಅನೇಕ ಕುಟುಂಬಗಳು ಬಾಡಿಗೆ ಪಡೆದು ಜೀವಿಸುತ್ತಿದ್ದರು. ಹಾಗೇ ಉದಯರಾಜ ರೂಮಿನ ಎದುರಿನ ಮನೆಯವಳೇ ಚೈತ್ರ!

ರೂಮು ನೋಡಲು ಬಂದ ಮೊದಲ ದಿನವೇ ಚೈತ್ರ ಅವನ ಕಣ್ಣಿಗೆ ಕಂಡು ಕರಗದೇ ಉಳಿದು ಬಿಟ್ಟಿದ್ದಳು. ಯಾರೇ ಆಗಲಿ ಒಂದೇ ನೋಟಕ್ಕೆ ಮಾರು ಹೋಗುವಂಥ ರೂಪ ಅವಳದು. ಕೆಲ ದಿನಗಳ ನಂತರ ಅವಳ ಬಗೆಗೆ